# ಕೂಡಲೇ 10ಸಾವಿರ ಕೋಟಿ ಬರ ಪರಿಹಾರ ನೀಡಲಿ

## ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವುದನ್ನು ಬಿಟ್ಟು ರಾಜ್ಯ ಸರ್ಕಾರ ಕೆಲಸ ಮಾಡಲಿ: ಶಾಸಕ ಸುರೇಶಗೌಡ

• **ಕನ್ನಡಪ್ರಭ ವಾರ್ತೆ,** ತುಮಕೂರು

ರಾಜ್ಯದಲ್ಲಿ ತೀವ್ರ ಬರಗಾಲ ಎದುರಾಗಿದ್ದು ರಾಜ್ಯ ಸರ್ಕಾರ ತುರ್ತು ಪರಿಹಾರಕ್ಕಾಗಿ ಹತ್ತು ಸಾವಿರ ಕೋಟಿ ರು. ಬಿಡುಗಡೆ ಮಾಡಬೇಕು. ಸರ್ಕಾರ ರೈತರ ಮನೆ ಬಾಗಿಲಿಗೆ ಹೋಗಿ ಅವರ ಸಂಕಷ್ಟ ಪರಿಹರಿಸಬೇಕು ಎಂದು ತುಮಕೂರು ಗ್ರಾಮಾಂತರ ಕ್ಷೇತ್ರ ಶಾಸಕ ಬಿ. ಸುರೇಶ್‌ಗೌಡ ಒತ್ತಾಯಿಸಿದರು.

ಸೋಮವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬರ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಒಂದು ರೂಪಾಯಿಯನ್ನೂ ಬಿಡುಗಡೆ ಮಾಡದೆ, ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ ಎಂದು ಮಂತ್ರಿಗಳು ಕೇಂದ್ರದ ಮೇಲೆ ಗೂಬೆ ಕೂರಿಸುತ್ತಿದೆ ಹೊರತು ತಮ್ಮ ಸರ್ಕಾರದ ಜವಾಬ್ದಾರಿಯನ್ನು ನಿರ್ವಹಿಸುತ್ತಿಲ್ಲ. ಮೊದಲು ಜನರ ಹಿತ ಕಾಪಾಡಲು ತನ್ನ ಜವಾಬ್ದಾರಿ ಏನು ಎಂಬುದನ್ನು ಸರ್ಕಾರ ಅರಿಯಬೇಕಿದೆ ಎಂದು ಟೀಕಿಸಿದರು.

ರಾಜ್ಯದ 240 ತಾಲೂಕುಗಳ ಪೈಕಿ 141 ತಾಲೂಕುಗಳಲ್ಲಿ ಬರ ಬಿದ್ದಿದೆ. ತುಮಕೂರು ಸೇರಿದಂತೆ 31 ಜಿಲ್ಲೆಗಳಲ್ಲಿ 24 ಜಿಲ್ಲೆಗಳು ಬರಪೀಡಿತವಾಗಿವೆ. ಒಟ್ಟು ಶೇಕಡ 42 ರಷ್ಟು ಮಳೆ ಕೊರತೆ ಇದೆ ಎಂದು ಅಂದಾಜು ಮಾಡಲಾಗಿದೆ.



ಪತ್ರಿಕಾಗೋಷ್ಠಿಯಲ್ಲಿ ಗ್ರಾಮಾಂತರ ಕ್ಷೇತ್ರ ಶಾಸಕ ಬಿ. ಸುರೇಶ್‌ಗೌಡ ಮಾತನಾಡಿದರು.

ಈಚಿನ ವರ್ಷಗಳಲ್ಲಿ ಕರ್ನಾಟಕ ಇಂಥ ಭೀಕರ ಬರದ ಸ್ಥಿತಿಯನ್ನು ಎದುರಿಸಿರಲಿಲ್ಲ. ಇಂಥ ಗಂಭೀರ ಸ್ಥಿತಿಯನ್ನು ಎದುರಿಸಲು ರಾಜ್ಯ ಸರ್ಕಾರ ತಕ್ಷಣ ಕನಿಷ್ಠ 10,000 ಕೋಟಿ ರೂಪಾಯಿ ಬಿಡುಗಡೆ ಮಾಡಬೇಕು. ಸಂಕಷ್ಟದಲ್ಲಿ ರೈತರಿಗೆ ಮಿಡಿದು ತನಗೆ ಹೃದಯ ಇದೆ ಎಂದು ತೋರಿಸಬೇಕು. ಮಳೆಯ ಕೊರತೆಯಿಂದಾಗಿ ಮುಂಗಾರು ಬೆಳೆ ಬಿತ್ತನೆ ಹಿಂದೆ ಬಿದ್ದಿದೆ ಎಂದರು.

ಕೃಷಿ ಬೆಳೆಯ ಕಠಿಣ ಸ್ಥಿತಿ ಒಂದು ಕಡೆಯಾದರೆ ಮೇವಿನ ಕೊರತೆ ಕಾಣಿಸಿಕೊಂಡು ಜಾನುವಾರುಗಳಿಗೆ ತೀವ್ರ ಸಂಕಷ್ಟ ಎದುರಾಗುವ ಸ್ಥಿತಿ ಇದೆ. ಕೂಡಲೇ ಮೇವು ಬ್ಯಾಂಕ್ ಸ್ಥಾಪನೆ ಮಾಡಬೇಕು. ಇಂಥ ಸ್ಥಿತಿಯನ್ನು ಎದುರಿಸಬೇಕಾದ ಸರ್ಕಾರ ಸಂಪೂರ್ಣ ಸನ್ನದ್ಧ ಸ್ಥಿತಿಯಲ್ಲಿ ಇರಬೇಕಿತ್ತು. ಆದರೆ, ಕರ್ನಾಟಕದಲ್ಲಿ ಸರ್ಕಾರವೇ ಇಲ್ಲ. ಈಗ ರಾಜ್ಯದಲ್ಲಿ ಕಂದಾಯ ಸಚಿವರು ಮಾತ್ರ ಇದಾರೆ. ಕೃಷಿ, ತೋಟಗಾರಿಕಾ, ಜಲಸಂಪನ್ಮೂಲ ಸಚಿವರೇ ಇಲ್ಲ. ಕೃಷಿ ಸಂಬಂಧಿ ಸಚಿವರು ರಾಜ್ಯದಾದ್ಯಂತ ಪ್ರವಾಸ ಮಾಡಿ ರೈತರನ್ನು ಭೇಟಿ ಮಾಡಿ ಬರಗಾಲದ ಸ್ಥಿತಿಯನ್ನು ಈಗಾಗಲೇ ಅಂದಾಜು ಮಾಡಬೇಕಿತ್ತು.

> **ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು 4 ರಂದು ಮಂಗಳವಾರ ತುಮಕೂರು ಜಿಲ್ಲೆಯಲ್ಲಿ ಬರ ಅಧ್ಯಯನ ಪ್ರವಾಸ ಕೈಗೊಂಡಿದ್ದು, ಪರಿಸ್ಥಿತಿ ಅಧ್ಯಯ, ರೈತರೊಡನೆ ಸಂವಾದ ನಡೆಸಲಿದ್ದಾರೆ . ರಾಜ್ಯ ಸರ್ಕಾರ ಬರಗಾಲ ಸ್ಥಿತಿ ಎದುರಿಸಲು ತಾನು ಏನು ಮಾಡಬೇಕು ಎಂಬ ಕುರಿತು ಇದುವರೆಗೆ ಯೋಚನೆ ಮಾಡಿಯೇ ಇಲ್ಲ. ತಾನು ಎಷ್ಟು ಹಣ ಬಿಡುಗಡೆ ಮಾಡುತ್ತೇನೆ ಎಂದು ಇದುವರೆಗೆ ಹೇಳಿಲ್ಲ. ಇದು ಹೃದಯವೇ ಇಲ್ಲದ ಸರ್ಕಾರವಾಗಿದೆ.**
> • **ಸುರೇಶಗೌಡ,** ಗ್ರಾಮಾಂತರ ಶಾಸಕ

ಈಗ ಸಚಿವರಾಗಿ ಪ್ರಮಾಣ ಚನ ಸ್ವೀಕಾರ ಮಾಡಿದವರು ಇಲಾಖೆಯನ್ನು ಅರ್ಥ ಮಾಡಿಕೊಳ್ಳಲು ಕನಿಷ್ಠ ಮೂರು ತಿಂಗಳಾದರೂ ಬೇಕಾಗುತ್ತದೆ ಇಂಥ ಸ್ಥಿತಿಯಲ್ಲಿ ಕೃಷಿಕರನ್ನು ಕಾಪಾಡುವವರು ಯಾರು? ಎಂದು ಪ್ರಶ್ನಿಸಿದರು.

ರಾಜ್ಯದ ಸಚಿವರ ತಂಡ ಹೋಗಿ ಅಧ್ಯಯನ ಮಾಡಿ ಇಂಥ ಪತ್ರ ಬರೆಯಬೇಕು. ನಾವೇ ಪೂರ್ವ ಸಿದ್ಧತೆ ಮಾಡಿಕೊಳ್ಳದೇ ಇದ್ದರೆ ಕೇಂದ್ರ ಸರ್ಕಾರ ನಮ್ಮ ನೆರವಿಗೆ ಏಕೆ ಬರುತ್ತದೆ? ಆಮೇಲೆ ಕೇಂದ್ರ ಸಹಾಯ ಮಾಡಲಿಲ್ಲ ಎಂದು ದೂರುವುದಕ್ಕೆ ರಾಜ್ಯ ಸರ್ಕಾರ ಈಗಲೇ ಸಿದ್ಧತೆ ಮಾಡಿಕೊಳ್ಳುತ್ತಿದೆ ಎನ್ನುವುದು ಸ್ಪಷ್ಟವಾಗಿದೆ. ಇದನ್ನು ರಾಜ್ಯ ಬಿಜೆಪಿ ನಾಯಕರು ಸಹಿಸುವುದಿಲ್ಲ ಎಂದರು.

ರಾಜ್ಯದಲ್ಲಿ ಭೀಕರ ಬರಸ್ಥಿತಿ ನಿರ್ವಹಣೆ ಮಾಡಬೇಕಾದ ರಾಜ್ಯ ಸರ್ಕಾರದ ನಾಯಕರು ಸಚಿವ ಸಂಪುಟ ವಿಸ್ತರಣೆಗಾಗಿ ಹೈಕಮಾಂಡ್ ಬಾಗಿಲು ಕಾಯುತ್ತಿದೆ. ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರು ರಾಹುಲ್ ಗಾಂಧಿ ಮನೆಬಾಗಿಲು ಕಾಯುವ ಪರಿಸ್ಥಿತಿಗೆ ತಂದಿರುವುದು ರಾಜ್ಯದ 7 ಕೋಟಿ ಜನರಿಗೆ ಮಾಡಿದ ಅವಮಾನ ಎಂದು ಸುರೇಶ್‌ಗೌಡರು ಟೀಕಿಸಿದರು.

ಈ ವೇಳೆ ವೈ.ಎ ಚ್. ಹುಚ್ಚಯ್ಯ, ಮಾಜಿ ಸದಸ್ಯರಾದ ಗೂಳೂರು ಶಿವಕುಮಾರ್, ಪುಟ್ಟ ಲಕ್ಷ್ಮಮ್ಮ, ತಾಲೂಕು ಬಿಜೆಪಿ ಅಧ್ಯಕ್ಷ ರಾಜಶೇಖರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಮುಖಂಡರಾದ ಹೊಳಕಲ್ಲು ಆಂಜನಪ್ಪ, ಪ್ರಭಾಕರ್, ವಿಜಯಕುಮಾರ್, ರೇಣುಕಮ್ಮ, ಊರ್ಡಿಗೆರೆ ರವಿ, ಸತೀಶ್, ರಮೇಶ್ ಯಲ್ಲಾಪುರ, ಊರುಕೆರೆ ಪುರುಷೋತ್ತಮ್ ಮೊದಲಾದವರು ಹಾಜರಿದ್ದರು.

## ಸುದ್ದಿ ಸಿಂಚನ

### ಪ್ರಾಮಾಣಿಕತೆಯಿಂದ ಯಶಸ್ಸು ಕಾಣಲು ಸಾಧ್ಯ



**ಗುಬ್ಬಿ:** ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಕೇವಲ ಪಠ್ಯ ಜ್ಞಾನವಷ್ಟೇ ಅಲ್ಲದೆ, ವ್ಯಕ್ತಿತ್ವ ವಿಕಸನ, ಸ್ವಾವಲಂಬನೆ ಮತ್ತು ಸಾಮಾಜಿಕ ಜವಾಬ್ದಾರಿಗಳ ಅರಿವು ಮೂಡಿಸಲಾಗುತ್ತದೆ ಎಂದು ಪ್ರಾಂಶುಪಾಲ ಡಾ.ಓ.ನಾಗರಾಜು ತಿಳಿಸಿದರು. ಗುಬ್ಬಿ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಥಮ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪರಿಚಯಾತ್ಮಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಸಮಯದ ಸದ್ಬಳಕೆ ಮಾಡಿಕೊಂಡು ತಮ್ಮ ಕನಸುಗಳನ್ನು ನನಸಾಗಿಸಿಕೊಳ್ಳಬೇಕು. ಶಿಕ್ಷಣವು ಕೇವಲ ಪದವಿ ಪಡೆಯುವ ಸಾಧನವಲ್ಲ, ಅದು ಉತ್ತಮ ವ್ಯಕ್ತಿತ್ವ, ಸಂಸ್ಕಾರ ಮತ್ತು ಸಮಾಜಮುಖಿ ಬದುಕಿನ ಅಡಿಪಾಯವಾಗಿದೆ. ವಿದ್ಯಾರ್ಥಿಗಳು ಶಿಸ್ತು, ಸಮಯಪಾಲನೆ, ಪರಿಶ್ರಮ ಮತ್ತು ಪ್ರಾಮಾಣಿಕತೆಯನ್ನು ಜೀವನದ ಮೌಲ್ಯಗಳಾಗಿ ಅಳವಡಿಸಿಕೊಂಡರೆ ಯಾವುದೇ ಕ್ಷೇತ್ರದಲ್ಲೂ ಯಶಸ್ಸು ಸಾಧಿಸಬಹುದು ಎಂದು ತಿಳಿಸಿದರು.ಹೊಸ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಬೆಳೆಸುವುದು, ಶಿಕ್ಷಣದ ಮಹತ್ವ ಅರಿವು ಮೂಡಿಸುವುದು ಹಾಗೂ ಕಾಲೇಜಿನೊಂದಿಗೆ ಉತ್ತಮ ಬಾಂಧವ್ಯ ಬೆಳೆಸುವ ಉದ್ದೇಶದಿಂದ ಆಯೋಜಿಸಿದ್ದ ಪರಿಚಯಾತ್ಮಕ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆಯಿತು. ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದು, ಹೊಸ ಶೈಕ್ಷಣಿಕ ಜೀವನಕ್ಕೆ ಆತ್ಮವಿಶ್ವಾಸದೊಂದಿಗೆ ಮುನ್ನುಗ್ಗುವ ಸಂಕಲ್ಪ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಶೈಕ್ಷಣಿಕ ಡೀನ್ ಡಿ.ಎನ್. ಮನೋಹರ್‌ಬಾಬು, ಗ್ರಂಥಪಾಲಕ ಡಾ. ರಾಘವೇಂದ್ರ, ಸಮಾಜಶಾಸ್ತ್ರ ಮುಖ್ಯಸ್ಥ ಆರ್ ಅಶೋಕ್, ಶ್ರೀಕಾಂತ್, ರಾಜು, ತಿಮ್ಮಣ್ಣ, ಡಾ. ಸುಮುಖ, ಬಿ.ಎಸ್.ಶಿವಕುಮಾರಸ್ವಾಮಿ, ಮಲ್ಲಿಕಾರ್ಜುನ್ ಪ್ರಭು ಡಾ.ಕೆ.ಸಿ.ಮುದ್ದಗಂಗಯ್ಯ, ಡಾ.ತಿಮ್ಮನಾಯಕ್, ಡಾ.ತಿಮ್ಮೇಗೌಡ, ಡಾ. ಚಂದ್ರಶೇಖರಯ್ಯ ಜಿ , ಶಿವಪ್ಪ, ಮಧು ಹಾಗೂ ಕಾಲೇಜಿನ ಉಪನ್ಯಾಸಕ ವೃಂದ, ಬೋಧಕೇತರ ಸಿಬ್ಬಂದಿ ಹಾಗೂ ನೂರಾರು ನೂತನ ವಿದ್ಯಾರ್ಥಿಗಳು ಇದ್ದರು.

### ಸಂಪುಟದಲ್ಲಿ ಬ್ರಾಹ್ಮಣರಿಗೆ ಸಿಗದ ಅವಕಾಶ: ಆಕ್ರೋಶ

**ಹಾಸನ:** ರಾಜ್ಯ ಸಚಿವ ಸಂಪುಟ ವಿಸ್ತರಣೆಯಲ್ಲಿ ಬ್ರಾಹ್ಮಣ ಸಮುದಾಯದ ಒಬ್ಬರೂ ಶಾಸಕರಿಗೆ ಸಚಿವ ಸ್ಥಾನ ನೀಡದಿರುವುದು ಸಮುದಾಯಕ್ಕೆ ಮಾಡಿದ ಅನ್ಯಾಯ ಮತ್ತು ಅವಮಾನವಾಗಿದ್ದು, ಮುಂದಿನ ಸಂಪುಟ ವಿಸ್ತರಣೆಯಲ್ಲಿ ಅರ್ಹ ಬ್ರಾಹ್ಮಣ ಶಾಸಕರಿಗೆ ಸೂಕ್ತ ಪ್ರಾತಿನಿಧ್ಯ ನೀಡಬೇಕು ಎಂದು ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘದ ಜಿಲ್ಲಾ ಘಟಕ ಆಗ್ರಹಿಸಿದೆ.ಈ ಕುರಿತು ಪ್ರಕಟಣೆ ನೀಡಿರುವ ಸಂಘವು, ಬ್ರಾಹ್ಮಣ ಸಮುದಾಯವು ನಿರಂತರವಾಗಿ ಮಹತ್ವದ ಕೊಡುಗೆ ನೀಡುತ್ತಾ ಬಂದಿದ್ದರೂ, ಸಚಿವ ಸಂಪುಟದಲ್ಲಿ ಸಮುದಾಯಕ್ಕೆ ಯಾವುದೇ ಸ್ಥಾನ ನೀಡದಿರುವುದು ತೀವ್ರ ನಿರಾಶೆಗೆ ಕಾರಣವಾಗಿದೆ ಎಂದು ತಿಳಿಸಿದೆ. ಜಿಲ್ಲೆಯಾದ್ಯಂತ ಸಮುದಾಯದ ಮುಖಂಡರೊಂದಿಗೆ ಸಮಾಲೋಚನೆ ನಡೆಸಿ ಮುಂದಿನ ಹೋರಾಟದ ರೂಪುರೇಷೆ ಪ್ರಕಟಿಸಲಾಗುವುದು ಎಂದು ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘ ಎಚ್ಚರಿಕೆ ನೀಡಿದೆ.

# ಆಗಸ್ಟ್ ಬಂದರೂ ಹೇಮಾವತಿ ನೀರಿಲ್ಲ

## ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಮುಖಂಡ ಎಸ್.ಡಿ.ದಿಲೀಪ್ ಕುಮಾರ್‌ಆಕ್ರೋಶ



• **ಕನ್ನಡಪ್ರಭ ವಾರ್ತೆ** ಗುಬ್ಬಿ

ಪ್ರತಿ ವರ್ಷ ಜೂನ್ ಅಂತ್ಯದೊಳಗೆ ಹೇಮಾವತಿ ನೀರನ್ನು ಕೆರೆಗೆ ಹರಿಸುತ್ತಿದ್ದರು. ಆಗಸ್ಟ್ ಮೊದಲ ವಾರವಾದರೂ ನೀರನ್ನು ಹರಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಬಿಜೆಪಿ ಮುಖಂಡ ಎಸ್.ಡಿ.ದಿಲೀಪ್ ಕುಮಾರ್‌ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಕುಡಿಯುವ ನೀರಿಗೆ ತೀವ್ರ ಹಾಹಾಕಾರ ಎದುರಾಗಿದ್ದು, ಕೂಡಲೇ ಸರ್ಕಾರ ಎಚ್ಚೆತ್ತು ಜಿಲ್ಲೆಗೆ ಹೇಮೆ ನೀರು ಹರಿಸಬೇಕು. ಜಿಲ್ಲೆಯಲ್ಲಿ ಭೀಕರ ಬರಗಾಲ ಎದುರಾಗಿದ್ದು ಕುಡಿಯುವ ನೀರಿಗೂ ತತ್ವಾರ ಉಂಟಾಗಿದೆ. ಈ ಬಾರಿ ಮಳೆಯ ಅಭಾವ ಉಂಟಾಗಿದ್ದು ಹೇಮೆ ನೀರು ತಡ ಮಾಡಿರುವುದರಿಂದ ಕುಡಿಯುವ ನೀರಿಗೆ ತೀವ್ರ ಸಮಸ್ಯೆ ಎದುರಾಗಿದೆ ಮಾನ್ಯ ಮುಖ್ಯಮಂತ್ರಿಗಳು ಸಚಿವ ಸಂಪುಟ ವಿಸ್ತರಣೆಯಲ್ಲಿ ನಿರತರಾಗಿದ್ದು ಜಿಲ್ಲೆಯ ಹಿತ ಕಾಪಾಡುವಲ್ಲಿ ವಿಫಲರಾಗಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲೆಯ ಜನರ ಹಿತ ಕಾಯಬೇಕು ಹಾಗೂ ಕೂಡಲೇ ಹೇಮಾವತಿ ನೀರನ್ನು ಹರಿಸಬೇಕು. ಕುಡಿಯುವ ನೀರಿಗೆ ಅನುಕೂಲ ಮಾಡಿಕೊಡಬೇಕು ಇಲ್ಲದೆ ಹೋದಲ್ಲಿ ಜಿಲ್ಲಾ ಮತ್ತು ತಾಲ್ಲೂಕಿನಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪಂಚಾಕ್ಷರಿ, ಬಿಜೆಪಿ ತಾಲೂಕು ಅಧ್ಯಕ್ಷ ಬಲರಾಮಣ್ಣ ಮಾತನಾಡಿ ಈ ವರ್ಷ ಬರದ ಛಾಯೆ ಆವರಿಸಿರುವುದರಿಂದಕುಡಿಯುವನೀರಿಗೂಸಮಸ್ಯೆಯಾಗುತ್ತಿದೆ. ಜನ ಜಾನುವಾರುಗಳಿಗೂ ಇದರ ಬಿಸಿ ತಟ್ಟಿದೆ. ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಶಾಸಕರು ತಾಲೂಕಿನ ಎಲ್ಲಾ ಕೆರೆಗಳಿಗೂ ನೀರು ತುಂಬಿಸುವ ಮೂಲಕ ಕುಡಿಯುವ ನೀರಿಗೆ ಅನುಕೂಲ ಮಾಡಿಕೊಡಬೇಕು ಎಂದರು.

ಎಚ್.ಟಿ.ಭೈರಪ್ಪ ಮಾತನಾಡಿ ಕಳೆದ ಬಾರಿ ಅಧಿಕಾರಿಗಳ ನಿರ್ಲಕ್ಷ ಮತ್ತು ಗುಬ್ಬಿ ಶಾಸಕ್ಕ ಬೇಜವಾಬ್ದಾರಿ ತನದಿಂದ ಗುಬ್ಬಿ ತಾಲೂಕಿನ ಹಲವು ಕೆರೆಗಳು ಹೇಮಾವತಿ ನೀರಿನಿಂದ ತುಂಬಿರಲಿಲ್ಲ. ಆದರೆ ಈ ಬಾರಿ ಬರಗಾಲ ಎದುರಾಗಿದ್ದು ಕೆರೆಕಟ್ಟೆಗಳು ಬತ್ತಿ ಹೋಗಿ ಸಂಕಷ್ಟ ಎದುರಾಗಿದೆ. ಈ ಕೂಡಲೇ ಅಧಿಕಾರಿಗಳು ಮತ್ತು ಶಾಸಕರು ಸಲಹಾ ಸಮಿತಿಯ ಜೊತೆ ಚರ್ಚಿಸಿ ನೀರು ಹರಿಸುವ ಕೆಲಸಕ್ಕೆ ಮುಂದಾಗಬೇಕಿದೆ. ಇನ್ನೂ ಜಿಲ್ಲಾ ಉಸ್ತುವಾರಿ ಸಚಿವ ಮತ್ತು ಡಿಸಿಎಂ ಜಿ.ಪರಮೇಶ್ವರ್‌ಕೇವಲ ಬಿಡದಿ ಟೌನ್ ಶಿಪ್ ವಿಚಾರಕ್ಕೆ ಸೀಮಿತವಾಗಿದ್ದು ನಮ್ಮ ಜಿಲ್ಲೆಯ ರೈತರ ಪರ ನಿಂತು ಕೆರೆಗಳನ್ನು ತುಂಬಿಸುವ ಕೆಲಸದಲ್ಲಿ ವಿಫಲರಾಗಿದ್ದಾರೆ. ಈ ಬಾರಿ ನಮ್ಮ ನೀರು ಹರಿಸದಿದ್ದರೆ ಉಗ್ರ ಹೋರಾಟವನ್ನು ಬಿಜೆಪಿ ರೈತರೊಟ್ಟಿಗೆ ನಡೆಸಲಿದೆ ಎಂದು ಎಚ್ಚರಿಕೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಸಾಗರನಹಳ್ಳಿ ನಂಜೇಗೌಡ, ಜಿ.ಆರ್.ಶಿವಕುಮಾರ್, ಅಣ್ಣಪ್ಪಸ್ವಾಮಿ ಬಸವರಾಜು, ಬಿಕ್ಕೆಗುಡ್ಡ ವಿದ್ಯಾಸಾಗರ್, ಅರಿವೇಸಂದ್ರ ಲೋಕೇಶ್, ತಿರುಮಲೇಶ್, ನಂದಿಕೋಲ್ ರವಿ, ಚನ್ನಶೆಟ್ಟಿಹಳ್ಳಿ ಯತೀಶ್, ಗಂಗಣ್ಣ, ಸೇರಿದಂತೆ ಇತರರು ಹಾಜರಿದ್ದರು.

# ಕಾವೇರಿ ಅನ್ಯಾಯ: ವಿಜಯಸೇನೆ ಆಕ್ರೋಶ

• **ಕನ್ನಡಪ್ರಭ ವಾರ್ತೆ,** ತುಮಕೂರು

ರಾಜ್ಯದಲ್ಲಿ ಕುಡಿಯುವ ನೀರಿಗೂ ಹಾಹಾಕಾರ ಪರಿಸ್ಥಿತಿ ಇರುವಾಗ ತಮಿಳು ನಾಡಿಗೆ 15 ದಿನಗಳ ಕಾಲ ಪ್ರತಿದಿನ 3500 ಕ್ಯೂಸೆಕ್ ನೀರು ಹರಿಸಬೇಕೆಂಬ ಆದೇಶ ಅಮಾನವೀಯ. ಸರ್ಕಾರ ಯಾವುದೇ ಕಾರಣಕ್ಕೂನೀರು ಬಿಡಬಾರದು ಎಂದು ಒತ್ತಾಯಿಸಿ ವಿಜಯಸೇನೆ ಜಿಲ್ಲಾ ಕಾರ್ಯ ಕರ್ತರು ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿದರು.



ಸರ್ಕಾರ ಯಾವುದೇ ಕಾರಣಕ್ಕೂ ತಮಿಳುನಾಡಿಗೆ ಕಾವೇರಿ ನೀರು ಬಿಡಬಾರದು ಎಂದು ಒತ್ತಾಯಿಸಿ ವಿಜಯಸೇನೆ ಜಿಲ್ಲಾ ಕಾರ್ಯ ಕರ್ತರು ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ವಿಜಯಸೇನೆಯ ಆಟೋ ಘಟಕ ಕಾರ್ಯಕರ್ತರು ಆಟೋಗಳನ್ನು ಪ್ರತಿಭಟನೆಗೆ ತಂದಿದ್ದರು.ಈ ವೇಳೆ ಮಾತನಾಡಿದ ಸಂಘಟನೆಯ ಜಿಲ್ಲಾಧ್ಯಕ್ಷ ಕೆ.ಗಂಗಾಧರ್, ಈ ಕೆ.ಆರ್.ಎಸ್‌ನಲ್ಲಿ ಶೇಕಡ 33 ರಷ್ಟು ಮಾತ್ರ ನೀರಿದೆ.ಹೀಗಿರುವಾಗ ತಮಿಳುನಾಡಿಗೆ ನೀರು ಹರಿಸಬೇಕು ಎಂದು ಹೇಳಿರುವುದು ಸರಿಯಲ್ಲ ಎಂದರು.

ಪ್ರಸ್ತುತ ಕಾವೇರಿ ಕಣಿವೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರು ಸುತ್ತಿರುವ ಹೊತ್ತಿನಲ್ಲಿ ತಮಿಳುನಾಡು ಭಾಗದ ಬೆಳೆಗಳಿಗೆ ಪ್ರತಿನಿತ್ಯ 3500 ಕ್ಯೂಸೆಕ್ ನೀರು ಬಿಡುವಂತೆ ಆದೇಶಿಸಿರುವುದು ದುರಾದೃಷ್ಟಕರ. ಕುಡಿಯುವ ನೀರು ಮೊದಲ ಆದ್ಯತೆಯಾಗಿದ್ದು ಈಗಾಗಲೇ ಬೆಳೆದ ಬೆಳೆಗಳು ಒಣಗುತ್ತಿದ್ದು, ಕುಡಿಯುವ ನೀರಿ ಗೂ ಆಹಾಕಾರ ಸೃಷ್ಟಿಯಾಗಿದೆ ಎಂದರು.

ಕಾವೇರಿ ಕೊಳ್ಳದ ರೈತ ರಕ್ಷಣೆ ಮಾಡುವುದು ಕೂಡ ರಾಜ್ಯ ಸರ್ಕಾರದ ಕರ್ತವ್ಯ.ತಕ್ಷಣ ಮರು ಪರಿಶೀಲನಾ ಅರ್ಜಿಯನ್ನು ಟ್ರಿಬ್ಯುನಲ್ ಮುಂದೆ ಸಲ್ಲಿಸಿ ಸಮರ್ಥ ರೀತಿಯಲ್ಲಿವಾದಮಂಡಿಸಬೇಕು, ಕಾವೇರಿ ನೀರು ನಿಯಂತ್ರಣ ಸಮಿತಿ ಮಾಡಿರುವ ಶಿಫಾರಸ್ಸನ್ನು ಒಪ್ಪಿ ಕಾವೇರಿ ನೀರು ತಮಿಳು ನಾಡಿಗೆ ಯಾವುದೇ ಕಾರಣಕ್ಕೂ ನೀರು ಬಿಡಬಾರದು ಎಂದು ಒತ್ತಾಯಿಸಿದರು.

ನಂತರ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿಪತ್ರ ಸಲ್ಲಿಸಿದರು. ವಿಜಯಸೇನೆಜಿಲ್ಲಾಪ್ರಧಾನಕಾರ್ಯದರ್ಶಿ ಹರೀಶ್, ಉಪಾಧ್ಯಕ್ಷ ನಯನ್‌ಕುಮಾರ್, ಆಟೋ ಘಟಕ ಜಿಲ್ಲಾಧ್ಯಕ್ಷ ತಿಪ್ಪೇಶ್, ನಗರ ಅಧ್ಯಕ್ಷ ರಾಕೇಶ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಕೆ.ರುದ್ರೇಶ್, ಕಾರ್ಯಾಧ್ಯಕ್ಷ ಎಸ್. ರುದ್ರೇಶ್, ಪ್ರಧಾನ ಕಾರ್ಯದರ್ಶಿ ಯೋಗೀಶ್, ಮಹಿಳಾ ಘಟಕ ಜಿಲ್ಲಾಧ್ಯಕ್ಷೆ ಯಾಸ್ಮೀನ್ ತಾಜ್, ನಗರ ಅಧ್ಯಕ್ಷೆ ಕಾವ್ಯ ಶಿವಶಂಕರ್, ಮುಖಂಡರಾದ ಮೋಹನ್, ತಿಮ್ಮರಾಜು, ಪವನ್, ಅಂಬಿಕಾ ಮಹೇಶ್, ಕನ್ನಿಕಾಂಬ ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಬಂದ್‌ಗೆ ಕನ್ನಡ, ಇತರೆ ಸಂಘಗಳ ಒಕ್ಕೂಟ ಬೆಂಬಲ

• **ಕನ್ನಡಪ್ರಭ ವಾರ್ತೆ** ತುಮಕೂರು

ತಮಿಳುನಾಡಿಗೆ ಕಾವೇರಿ ನೀರು ಬಿಡುವುದನ್ನು ವಿರೋಧಿಸಿ ಕನ್ನಡಪರ ಸಂಘಟನೆಗಳ ಒಕ್ಕೂಟ ಕರೆ ನೀಡಿರುವ ಈ ತಿಂಗಳ 13ರ ಕರ್ನಾಟಕ ಬಂದ್‌ಗೆ ನಗರದ ಕನ್ನಡಪರ ಹಾಗೂ ಇತರೆ ಸಂಘಗಳ ಒಕ್ಕೂಟ ಬೆಂಬಲ ನೀಡಿದೆ. ಈ ಸಂಬಂಧ ನಗರದಲ್ಲಿ ಸಭೆ ಸೇರಿ ಚರ್ಚಿಸಿದ ಸಂಘಟನೆಗಳ ಮುಖಂಡರು 13ರ ಬಂದ್ ಹೋರಾಟದಲ್ಲಿ ಭಾಗವಹಿಸಲು ತೀರ್ಮಾನಿಸಿದರು.

ಒಕ್ಕೂಟದ ಅಧ್ಯಕ್ಷ ಎಂ ಗೋಪಿ ಮಾತನಾಡಿ, ಕಾವೇರಿ ನೀರು ನಿಯಂತ್ರಣ ಸಮಿತಿ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಆದೇಶ ರಾಜ್ಯದ ಜನರಿಗೆ ಮಾರಕವಾಗಿದೆ. ಮಳೆ ಇಲ್ಲದೆ, ಕುಡಿಯುವ ನೀರಿಗೂ ತೊಂದರೆಯಾಗಿ ಹಾಹಾಕಾರ ಪರಿಸ್ಥಿತಿ ಇರುವಾಗ ತಮಿಳುನಾಡಿಗೆ ಕಾವೇರಿ ನೀರು ಹರಿಸುವ ನಿರ್ಧಾರ ಅಮಾನವೀಯ.ಇದರ ವಿರುದ್ಧ ರಾಜ್ಯದ ಎಲ್ಲಾ ಶಾಸಕರು, ಸಂಸದರು ಪಕ್ಷಾತೀತವಾಗಿ ಧ್ವನಿ ಎತ್ತಬೇಕು, ಕನ್ನಡಿಗರ ಹಿತಕಾಪಾಡಬೇಕು ಎಂದು ಒತ್ತಾಯಿಸಿದರು.

ದಲಿತ ಸಂಘರ್ಷ ಸಮಿತಿ ಜಿಲ್ಲಾಧ್ಯಕ್ಷ ಪಿ.ಎನ್. ರಾಮಯ್ಯ ಮಾತನಾಡಿ, ಕಾವೇರಿ ನೀರು ನಿಯಂತ್ರಣ ಸಮಿತಿ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀಡಿರುವ ಆದೇಶವನ್ನು ರಾಜ್ಯದ ಹಿತಾಸಕ್ತಿಯಆಧಾರದಮೇಲೆಸರ್ಕಾರಬಲವಾಗಿವಿರೋಧಿಸಬೇಕು. ರಾಜ್ಯದ ಜಲಾಶಯಗಳ ವಾಸ್ತವಿಕ ನೀರಿನ ಸಂಗ್ರಹಣೆ ಹಾಗೂ



ಮಳೆಯ ಕೊರತೆಯಕುರಿತು ಸಮಗ್ರ ವರದಿಯನ್ನು ಸಲ್ಲಿಸಿ ಕರ್ನಾಟಕದ ಪರವಾಗಿ ವಾದ ಮಂಡಿಸುವಲ್ಲಿ ನಮ್ಮಪರ ನ್ಯಾಯವಾದಿಗಳು ಪದೇಪದೆ ವಿಫಲವಾಗುತ್ತಿರುವುದುದು ರಾದೃಷ್ಟಕರ. ನ್ಯಾಯಮಂಡನೆಗಾಗಿ ಸರ್ಕಾರ ಸಾರ್ವಜನಿಕರ ಕೋಟ್ಯಾಂತರ ರು.ಖರ್ಚು ಮಾಡಿದರೂ ನಮಗೆ ನ್ಯಾಯ ಸಿಗುತ್ತಿಲ್ಲ ಎಂದು ಬೇಸರವ್ಯಕ್ತಪಡಿಸಿದರು. ಒಕ್ಕೂಟದಪ್ರಧಾನಕಾರ್ಯದರ್ಶಿ ಬಾಬಾ, ಸಂಘಟನಾ ಕಾರ್ಯದರ್ಶಿ ಟಿ.ಎಸ್. ರಕ್ಷಿತ್‌ಕುಮಾರ್, ಖಜಾಂಚಿ ಕನ್ನಡ ಪ್ರಕಾಶ್, ಕರ್ನಾಟಕ ಕಲಾವಿದರ ಒಕ್ಕೂಟದ ಅಧ್ಯಕ್ಷ ವೀರೇಶ್‌ಪ್ರಸಾದ್ ಗುಬ್ಬಿ, ಮುಖಂಡರಾದ ರಾಜಣ್ಣ, ಆದಿಲ್ ಬಾಷಾ, ಗಂಗಾಧರ್, ಷಾಹೀದ್‌ಖಾನ್, ಶಾಮೀದ್ ಖಾನ್, ಗೌಸ್‌ಖಾನ್ ಮೊದಲಾದವರು ಭಾಗವಹಿಸಿದ್ದರು.

# ಮಗುವಿಗೆ ತಾಯಿಯ ಹಾಲು ಮಾತ್ರ ನೀಡಿ: ಡಾ.ಸವಿತ

• **ಕನ್ನಡಪ್ರಭ ವಾರ್ತೆ** ಗುಬ್ಬಿ

ಮಗುವಿನ ಜನನದಿಂದ 6 ತಿಂಗಳವರೆಗೆ ಬೇರೆ ಯಾವುದೇ ನೀರು ಅಥವಾ ಆಹಾರವಿಲ್ಲದೆ ಕೇವಲ ತಾಯಿಯ ಎದೆಹಾಲು ಮಾತ್ರ ನೀಡಬೇಕು ಎಂದು ತಾಲೂಕು ಆರೋಗ್ಯ ಅಧಿಕಾರಿ ಡಾ.ಸವಿತ ತಿಳಿಸಿದರು. ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಆರೋಗ್ಯ ಇಲಾಖೆಯಿಂದ ಏರ್ಪಡಿಸಿದ್ದ ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿದರು. ವಿಶ್ವ ಸ್ತನ್ಯಪಾನ ಸಪ್ತಾಹವನ್ನು ಪ್ರತಿ ವರ್ಷ ಆಗಸ್ಟ್ 1 ರಿಂದ 7 ರವರೆಗೆ ಪ್ರಪಂಚದಾದ್ಯಂತ ಆಚರಿಸಲಾಗುತ್ತದೆ. ಇದು ತಾಯಿಯರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವಾಗಿದೆ. ಸರಿಯಾದ ಸ್ತನ್ಯಪಾನ ಪಡೆದ ಮಕ್ಕಳಲ್ಲಿ ದೈಹಿಕ ಬೆಳವಣಿಗೆ ಮತ್ತು ಮೆದುಳಿನ ವಿಕಾಸ ಉತ್ತಮವಾಗಿರುತ್ತದೆ. ಎದೆಹಾಲುಣಿಸುವುದರಿಂದ ತಾಯಿಗೆ ಹೆರಿಗೆಯ ನಂತರದ ರಕ್ತಸ್ರಾವ ಕಡಿಮೆಯಾಗುತ್ತದೆ ಎಂದು ತಿಳಿಸಿದರು. ವೈದ್ಯಾಧಿಕಾರಿ ಡಾ. ಕೇಶವರಾಜು ಮಾತನಾಡಿ,ತಾಯಿಯು ಹೆಚ್ಚು ದಿನಗಳ ಕಾಲ ಎದೆ ಹಾಲು ಉಣಿಸುವುದರಿಂದ, ತಾಯಿ ಮತ್ತು ಮಗುವಿನ ನಡುವೆ ಆತ್ಮೀಕ ಹಾಗೂ ಭಾವನಾತ್ಮಕ ಬಾಂಧವ್ಯ ಗಟ್ಟಿಯಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿಗಳು, ಮಕ್ಕಳ ತಾಯಂದಿರರು ಇತರರು ಇದ್ದರು.

ಕಂಟೈನರ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್
CONTAINER CORPORATION OF INDIA LTD.
कॉनकॉर CONCOR
( ಭಾರತ ಸರ್ಕಾರದ ನವರತ್ನ ಯೋಜನೆ (A Navratna Undertaking of Govt. of India)
No. MSTC/SRO/CONCOR/2/26-27-23837, 23838, 23840, 23841, 23843
ಆನ್‌ಲೈನ್ ಮೂಲಕ ಹರಾಜು ಮಾರಾಟ
ಕಾನ್‌ಕಾರ್ ಸಂಸ್ಥೆಯು ತನ್ನ ಪ್ರಾಂತ್ಯಗಳ ವಿವಿಧ ಟರ್ಮಿನಲ್ (ಚೆನ್ನೈ, ಬೆಂಗಳೂರು, ಕೊಚ್ಚಿನ್, ಹೈದರಾಬಾದ್ ಮತ್ತು ನಯಾ ರಾಯ್‌ಪುರ) ಪ್ರದೇಶ-III (ದಕ್ಷಿಣ)ಗಳಲ್ಲಿ ಲಭ್ಯವಿರುವ ಹಾನಿಗೊಳಗಾದ ದೇಶಿಯ ಕಂಟೈನರ್, ಕಾರ್ಗೋ ತೆರವುಗೊಳಿಸದ/ಕ್ಲೈಮ್ ಮಾಡದ ಆಮದಾದ ಸರಕುಗಳ ಐಟಂಗಳ ಆನ್‌ಲೈನ್ ಹರಾಜು ಮಾರಾಟಕ್ಕಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿದೆ. ಆಮದಾದ ಕಾರ್ಗೋಗಳಿಗೆ ಸಂಬಂಧಿತ ಇಂಪೋರ್ಟರ್/ಕಂಸೈನಿ ಇನ್ನಾವುದೇ ಹೆಚ್ಚಿನ ನೋಟೀಸ್ ನೀಡದೇ, 1962ರ ಕಸ್ಟಮ್ಸ್ ಕಾಯಿದೆಯ ಕಲಂ 48ರ ಕಟ್ಟುಪಾಡುಗಳಂತೆ ಹರಾಜು ಮಾರಾಟವನ್ನು ವ್ಯವಸ್ಥೆ ಮಾಡಲಾಗಿದೆ ಅಪೀಲ್‌ನಡಿ ಅಥವಾ ಘನ ನ್ಯಾಯಾಲಯದ ಮುಂದೆ ಮೊಕದ್ದಮೆ ಇದ್ದ ಪಕ್ಷದಲ್ಲಿ ಏನಾದರೂ ಸಿಂಧುವಾದ ಆಕ್ಷೇಪಣೆ ಇದ್ದಲ್ಲಿ ಈ ಸೂಚನೆ ಪ್ರಕಟಿಸಿದ 7 ದಿನಗಳ ಒಳಗಾಗಿ ಸಲ್ಲಿಸಬೇಕು. ಇಲ್ಲವಾದಲ್ಲಿ ಆಮದುದಾರರಿಗೆ/ಕಂಸೈನಿಗಳಿಗೆ ಯಾವುದೇ ಆಕ್ಷೇಪಣೆಗಳು ಇಲ್ಲವೆಂದು ಪರಿಭಾವಿಸಲಾಗುವುದು ಮತ್ತು ಅಂತಹ ಸರಕುಗಳನ್ನು ಯಾವುದೇ ಸೂಚನೆ ನೀಡದೇ ಮಾರಾಟ ಮಾಡಲಾಗುವುದು. ಹರಾಜನ್ನು ಮೆ|| ಎಂಎಸ್‌ಟಿಸಿ ಲಿ., ಅಧಿಕೃತ ಇ-ಕಾಮರ್ಸ್ ಸೇವಾ ಪೂರೈಕೆದಾರರಾದ ಮೆ|| ಕಾನ್‌ಕಾರ್ ಮೂಲಕ ಆನ್‌ಲೈನ್ ಹರಾಜು ಪ್ರಕ್ರಿಯೆಯನ್ನು ನಡೆಸಲಾಗುವುದು. ಕಂಟೇನರ್/ಕಾರ್ಗೋಗಳ ಪರಿಶೀಲನೆಗಾಗಿ ಸಂಬಂಧಿಸಿದ ಕಾನ್‌ಕಾರ್ ಟರ್ಮಿನಲ್‌ಗಳಲ್ಲಿ 01.08.2026 ರಿಂದ 20.08.26 ರವರೆಗೆ ಕಛೇರಿ ಕೆಲಸದ ದಿನಗಳ ಕೆಲಸದ ವೇಳೆ/ಅವಧಿಯಲ್ಲಿ ಲಭ್ಯವಿರುತ್ತವೆ. ಆನ್‌ಲೈನ್ ಹರಾಜು ನಿಗಧಿತ ಕಾರ್ಯಸೂಚಿಯಂತೆ 21.08.2026 ರಂದು ನಡೆಯಲಿದೆ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಲಾಗಿನ್ ಆಗಿ www.concorindia.com ಅಥವಾ eprocure.gov.in or www.mstcindia.co.in ಅಥವಾ ಕಾನ್‌ಕಾರ್‌ನ ಸಂಪರ್ಕ ಸಂ. 044-26482192 ಅಥವಾ ಮೆ|| ಎಂಎಸ್‌ಟಿಸಿ ಲಿ., ದೂರವಾಣಿ ಸಂ. 044-25219004ಗೆ ಕರೆ ಮಾಡಿ. ತಿಳಿದುಕೊಳ್ಳಬಹುದು. ಅಥವಾ ಇ-ಇಮೇಲ್ ಮೂಲಕವಾದರೂ ಸಂಪರ್ಕಿಸಬಹುದು. ಇ-ಮೇಲ್ ವಿಳಾಸ: e-Mail:mhjain@mstcindia.co.in.ಈ ಬಗ್ಗೆ ಮುಂದೆ ಏನಾದರೂ ತಿದ್ದುಪಡಿಗಳು, ಬಂದಲ್ಲಿ ಮೇಲಿನ ವೆಬ್‌ಸೈಟ್‌ಗಳಲ್ಲಿ ಮಾತ್ರ ನೋಡುತ್ತಿರಲು ಕೋರಲಾಗಿದೆ.
ಸಹಿ/- ಪ್ರದೇಶ ಮುಖ್ಯಸ್ಥ-III (ದಕ್ಷಿಣ)

बैंक ऑफ़ बड़ौदा Bank of Baroda
ROSARB Bangalore Central
5ನೇ ಮಹಡಿ, ವಿಜಯ ಟವರ್ಸ್, 41/2, ಎಂ ಜಿ ರಸ್ತೆ, ಟ್ರಿನಿಟಿ ವೃತ್ತ, ಬೆಂಗಳೂರು - 560001.
ದೂರವಾಣಿ: 080-25011571/426, ಇ-ಮೇಲ್: sarbec@bankofbaroda.bank.in
ಈ-ಹರಾಜು ಮಾರಾಟ ಸೂಚನೆ "ಅನುಬಂಧ - IV-A [ನಿಯಮ 6(2) & 8 (6)]
ಇ-ಹರಾಜು ಮಾರಾಟ ಪ್ರಕಟಣೆ ನಿಯಮ 6(2) & 8(6) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002 ರ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ರಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ.
ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ / ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ / ಚಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಆಸ್ತಿಗಳ ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ, ಬೆಂಗಳೂರು ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, ದಿನಾಂಕ : 08.09.2026 ರಂದು ಸ್ವತ್ತನ್ನು " ಎಲ್ಲಿದೆಯೋ ಹಾಗೆ", "ಏನಿದೆಯೋ ಹಾಗೇ", "ಹೇಗಿದೆಯೋ ಹಾಗೇ", ಆಧಾರದ ಮೇಲೆ ಮಾರಾಟ ಮಾಡಲಾಗುವುದು. ಸಾಲಗಾರರ / ಜಾಮೀನುದಾರರ /ಅಡಮಾನದಾರರ ಆಸ್ತಿಯ ವಿವರ / ಬಾಕಿ ಮೊತ್ತ / ಮೀಸಲು ಬೆಲೆ / ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

| ಕ್ರ ಸಂ | ಸಾಲಗಾರರ / ಜಾಮೀನುದಾರರ / ಅಡಮಾನುದಾರ ಹೆಸರು & ವಿಳಾಸ | ಎನ್ಕಂಬರೆನ್ಸ್‌ಗಳೊಂದಿಗೆ ಸ್ಥಿರ/ಚರ ಆಸ್ತಿಯ ಸಂಕ್ಷಿಪ್ತ ವಿವರಣೆ (ಮಾಲೀಕರು/ಅಡಮಾನದಾರರ ಹೆಸರು: ಶ್ರೀ ಹರೀಶ್ ಕೃಷ್ಣಮೂರ್ತಿ ಬಿನ್ ಶ್ರೀ ಕೆ ಸಿ ಕೃಷ್ಣಮೂರ್ತಿ) | ಒಟ್ಟು ಬಾಕಿ ಮೊತ್ತ | ಇ-ಹರಾಜಿನ ದಿನಾಂಕ ಮತ್ತು ಸಮಯ | ಮೀಸಲು ಬೆಲೆ, ಇಎಂಡಿ ಕೊನೆಯ ದಿನಾಂಕ, ಇಎಂಡಿ ಮೊತ್ತ ಮತ್ತು ಬಿಡ್ ಗುಣಾಂಕ ಮೊತ್ತ | ಸ್ವಾಧೀನತೆಯ ವಿಧ | ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ. |
|---|---|---|---|---|---|---|---|
| 1. | (1) ಮೆ॥ ಶ್ರೀ ಸಾಯಿ ಎಂಟರ್‌ಪ್ರೈಸಸ್, ವ್ಯಾಪಾರ ಸ್ಥಳ: ನಂ.2, ಹೊರ ವರ್ತುಲ ರಸ್ತೆ, ರಾಮಮೂರ್ತಿನಗರ, ಬಾಣಸವಾಡಿ, ಬೆಂಗಳೂರು-560043. (2) ಶ್ರೀಮತಿ ಸುಷ್ಮಾ ಯು (ಮಾಲೀಕರು) ಕೋಂ ವಿಜಯ್ ಕುಮಾರ್, ನಂ.22, ಗಾರ್ಡನ್ ರಸ್ತೆ, ಶನಿಮಹಾತ್ಮ ದೇವಸ್ಥಾನದ ಹತ್ತಿರ, ಚಿಕ್ಕಪೇಟೆ, ತುಮಕೂರು-572101. ಮತ್ತೊಂದು ವಿಳಾಸ: ನಂ. 726-2ಬಿಎಂ, ದುರ್ಗಾ ದೀಪ, 2 ಬಿ ಮೇನ್, ಒಎಂಬಿಆರ್ ಲೇಔಟ್, ಬಾಣಸವಾಡಿ, ಬೆಂಗಳೂರು-560043. (3) ಶ್ರೀ ಆರ್ ವಿಜಯ್ ಕುಮಾರ್ (ಜಾಮೀನುದಾರರು), ನಂ.22, ಗಾರ್ಡನ್ ರಸ್ತೆ, ಶನಿಮಹಾತ್ಮ ದೇವಸ್ಥಾನದ ಹತ್ತಿರ, ಚಿಕ್ಕಪೇಟೆ, ತುಮಕೂರು-572101. (4) ಶ್ರೀ ಹರೀಶ್ ಕೃಷ್ಣಮೂರ್ತಿ (ಜಾಮೀನುದಾರರು), ನಂ. 1ಇ, ಕಲ್ಕೆರೆ, 1ನೇ ಮೇನ್, 2ನೇ ಕ್ರಾಸ್, ಆರ್‌ಎಂವಿ 2ನೇ ಹಂತ, ಡಾಲರ್ಸ್ ಕಾಲೋನಿ, ಬೆಂಗಳೂರು-560094. (5) ಶ್ರೀಮತಿ ಭಾಗೀರಥಿ ಕೋಂ ಹರೀಶ್ ಕೃಷ್ಣಮೂರ್ತಿ, ನಂ. 1ಇ, ಕಲ್ಕೆರೆ, 1ನೇ ಮೇನ್, 2ನೇ ಅಡ್ಡ ರಸ್ತೆ, ಆರ್‌ಎಂವಿ 2ನೇ ಹಂತ, ಡಾಲರ್ಸ್ ಕಾಲೋನಿ, ಬೆಂಗಳೂರು-560094. (6) ಶ್ರೀ ಮಯೂರ್ ಕೆ. ಬಿನ್ ಹರೀಶ್ ಕೃಷ್ಣಮೂರ್ತಿ, ನಂ. 1ಇ, ಕಲ್ಕೆರೆ, 1ನೇ ಮೇನ್, 2ನೇ ಅಡ್ಡ ರಸ್ತೆ, ಆರ್‌ಎಂವಿ 2ನೇ ಹಂತ, ಡಾಲರ್ಸ್ ಕಾಲೋನಿ, ಬೆಂಗಳೂರು-560094. (7) ಶ್ರೀಮತಿ ನಕ್ಷತ್ರಾ D/o ಹರೀಶ್ ಕೃಷ್ಣಮೂರ್ತಿ, ನಂ. 1ಇ, ಕಲ್ಕೆರೆ, 1ನೇ ಮೇನ್, 2ನೇ ಅಡ್ಡ ರಸ್ತೆ, ಆರ್‌ಎಂವಿ 2ನೇ ಹಂತ, ಡಾಲರ್ಸ್ ಕಾಲೋನಿ, ಬೆಂಗಳೂರು-560094. | ಷೆಡ್ಯೂಲ್ ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಿವೇಶನ ನಂ.1ಇ, 1ನೇ ಮೇನ್, 2ನೇ ಕ್ರಾಸ್, ಆರ್‌ಎಂವಿ 2ನೇ ಹಂತ, ಡಾಲರ್ಸ್ ಕಾಲೋನಿ, ಬೆಂಗಳೂರು-560094ರಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40.5 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 31 ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.1ಡಿ, ಪಶ್ಚಿಮಕ್ಕೆ: ನಿವೇಶನ ನಂ.1ಎಫ್, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ನಿವೇಶನ ನಂ.8. | ರೂ. 68,11,980.83 (ರೂಪಾಯಿ ಅರವತ್ತೆಂಟು ಲಕ್ಷದ ಹನ್ನೊಂದು ಸಾವಿರದ ಒಂಭೈನೂರ ಎಂಭತ್ತು ಮತ್ತು ಎಂಭತ್ತಮೂರು ಪೈಸೆ ಮಾತ್ರ) ಜೊತೆಗೆ ದಿನಾಂಕ: 31.07.2026 ರಂತೆ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು. | ದಿನಾಂಕ 08.09.2026 ಮಧ್ಯಾಹ್ನ 02.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ | ಮೀಸಲು ಬೆಲೆ ರೂ.4,07,00,000/- ಇಎಂಡಿ ರೂ. 40,70,000/- ಇಎಂಡಿ ಮೊತ್ತವನ್ನು ಸ್ವೀಕರಿಸುವ ಕೊನೆಯ ದಿನಾಂಕ: 08.09.2026 ಸಂಜೆ 05.55 ಗಂಟೆಯವರೆಗೆ ಗುಣಾಂಕ ಮೊತ್ತ ರೂ.1,00,000/- | ಸಾಂಕೇತಿಕವಾಗಿ ಸ್ವಾಧೀನತೆ | ಅಧಿಕೃತ ಅಧಿಕಾರಿಯವರ ಪೂರ್ವಾನು ಮತಿಯೊಂದಿಗೆ |

ಹರಾಜಿನ ಬಗ್ಗೆ ವಿವರವಾದ ಷರತ್ತು & ನಿಬಂಧನೆಗಳಿಗಾಗಿ ದಯವಿಟ್ಟು https://www.bankofbaroda.in/e-auction ನಲ್ಲಿ ಒದಗಿಸಲಾದ ಲಿಂಕ್ ಮತ್ತು ಆನ್‌ಲೈನ್ ಹರಾಜು ಪೋರ್ಟಲ್ Baanknet.com ಅನ್ನು ಉಲ್ಲೇಖಿಸಿ. ಅಲ್ಲದೆ, ನಿರೀಕ್ಷಿತ ಬಿಡ್ಡುದಾರರು ಅಧಿಕೃತ ಅಧಿಕಾರಿ, ದೂರವಾಣಿ ಸಂಖ್ಯೆ: 080-25011426, ಮೊಬೈಲ್: 9440647971.
ಸೂಚನೆ: ಆಸ್ತಿ ತೆರಿಗೆ, ವಿದ್ಯುತ್ ಶುಲ್ಕಗಳು, ನೀರಿನ ಬಿಲ್ ಮತ್ತು ನಿರ್ವಹಣೆ ಶುಲ್ಕಗಳು ಇತ್ಯಾದಿ ಸೇರಿದಂತೆ ಯಾವುದೇ ಇತರ ಶುಲ್ಕಗಳು ಇದ್ದಲ್ಲಿ ಯಶಸ್ವಿ ಬಿಡ್ದಾರರು ಮಾತ್ರ ಭರಿಸಬೇಕು.
ದಿನಾಂಕ: 03.08.2026
ಸ್ಥಳ: ಬೆಂಗಳೂರು
ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

# ಮೂರು ಯೋಜನೆಯಿಂದ 143 ಕೆರೆಗಳಿಗೆ ನೀರು

## ನೀರಾವರಿ ಹೋರಾಟ ಸತ್ಯಾಗ್ರಹದ ಹೋರಾಟಗಾರರ ಬಳಿ ಬಂದ ಶಾಸಕ ಸುರೇಶಬಾಬು

• **ಕನ್ನಡ ಪ್ರಭ ವಾರ್ತೆ** ಚಿಕ್ಕನಾಯಕನಹಳ್ಳಿ

ತಾಲೂಕಿನನೀರಾವರಿಯೋಜನೆಗಳಾದಎತ್ತಿನಹೊಳೆ, ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಹೇಮಾವತಿ ನೀರಾವರಿ ಯೋಜನೆ ಗಳಿಂದ ಒಟ್ಟು 143 ಕೆರೆಗಳಿಗೆ ಕುಡಿಯುವ ನೀರಿನ ಉದ್ದೇಶಕ್ಕೆ ಹರಿಸಲಾಗುವುದು ಎಂದು ಶಾಸಕ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.

ಪಟ್ಟಣದ ತಾಲೂಕು ಆಡಳಿತ ಸೌಧದ ಮುಂಭಾಗ ದಲ್ಲಿ ನಡೆಯುತ್ತಿರುವ 5ನೇ ದಿನದ ನೀರಾವರಿ ಹೋರಾಟದ ಸತ್ಯಾಗ್ರಹದ ಹೋರಾಟಗಾರರ ಬೇಡಿಕೆಯಂತೆ ನಮ್ಮ ತಾಲೂಕಿನ ಮೂರು ಯೋಜನೆಗಳಿಂದ ಎಷ್ಟು ನೀರು ಹಂಚಿಕೆಯಾಗಿದೆ, ಎಷ್ಟು ಕೆರೆಗಳಿಗೆ ಎಂಬ ಮಾಹಿತಿಯನ್ನು ತಿಳಿಸಿದ ಅವರು ಎತ್ತಿನ ಹೊಳೆ ಯೋಜನೆಯಿಂದ ಒಟ್ಟು 1.097ಟಿಎಂಸಿ ನೀರು ಹಂಚಿಕೆಯಾಗಿದ್ದು ಇದರಲ್ಲಿ 103 ಕೆರೆಗಳನ್ನು ತುಂಬಿಸಲು 0.75 ಟಿಎಂಸಿ ಹಾಗೂ 0.347ಟಿಎಂಸಿ ಕುಡಿಯುವ ನೀರಿಗಾಗಿ ಹಂಚಿಕೆ ಮಾಡಲಾಗಿದೆ. ಈ ಕಾಮಗಾರಿಯು ತಾಲೂಕಿನಲ್ಲಿ ಒಟ್ಟು 12.42ಕಿ.ಮೀ ಇದ್ದು ಇದರಲ್ಲಿ ಈಗಾಗಲೇ 10.89ಕಿ.ಮೀ ಆಗಿದ್ದು ಇನ್ನು 1.53ಕಿ,ಮೀ ಕಾಮಗಾರಿ ಪ್ರಗತಿಯಲ್ಲಿದೆ, ಈ ಯೋಜನೆಗೆ ಒಟ್ಟು 11ಹಳ್ಳಿಯು ಒಳಪಟ್ಟಿದ್ದು ಅಗತ್ಯವಾಗಿರುವ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಅವಾರ್ಡ್‌ಆ ಗಿದೆ. ಇದರೊಂದಿಗೆ ಭದ್ರಾಮೇಲ್ದಾಂಡೆ ಯೋಜನೆಯಲ್ಲಿ ಒಟ್ಟು 1.58ಟಿಎಂಸಿ ನೀರು ಹಂಚಿಕೆಯಾಗಿದ್ದು ಇದರಲ್ಲಿ 14ಕೆರೆಗಳನ್ನು ತುಂಬಿಸಲು 1.29ಟಿಎಂಸಿ ಹಾಗೂ ಒಟ್ಟು 4657ಹೆಕ್ಟರ್‌ಗೆ 0.295 ಟಿಎಂಸಿ ನೀರು ಹಂಚಿಕೆಯಾಗಿದೆ ಈ ಕಾಮ ಗಾರಿಯು ಒಟ್ಟು 26.74ಕಿ.ಮೀ ಉದ್ದವಿದ್ದು ಇದರಲ್ಲಿ 10.50ಕಿ.ಮೀ ಕಾಮಗಾರಿ ಮುಗಿದಿದ್ದು ಇನ್ನು 7.20ಕಿ.ಮೀ ಕಾಮಗಾರಿ ನಡೆಯುತ್ತಿದ್ದು ಇನ್ನು 9.05ಕಿ.ಮೀ ಕಾಮಗಾರಿ ಪ್ರಾರಂಭವಾಗಬೇಕಿದೆ. ಹೇಮಾವತಿ ಕಾಮಗಾರಿಯಲ್ಲಿ ಒಟ್ಟು 0.80ಟಿಎಂಸಿ ನೀರು ಹಂಚಿಕೆಯಾಗಿದ್ದು ಒಟ್ಟು 26ಕೆರೆಗಳಲ್ಲಿ 4 ಕೆರೆಗಳು ಏತ ನೀರಾವರಿ ಹಾಗೂ 24ಕೆರೆಗಳಿಗೆ ಗುರುತ್ವಾಕರ್ಷಣೆಯ ಮೂಲಕ ಹರಿಸಲಾಗುವುದು ಈ ಯೋಜನೆಗಳು ನಮ್ಮ ಕ್ಷೇತ್ರದ ರೈತರಿಗೆ ಅನುಕೂಲವಾಗಲಿವೆ. ಎಲ್ಲಾ ರೈತರು ಸಹಕರಿಸ ಬೇಕು ನಿಮ್ಮ ಎಲ್ಲಾ ಬೇಡಿಕೆಗಳಿಗೂ ನಿಮ್ಮ ಹೋರಾಟಕ್ಕೆ ನಮ್ಮ ಬೆಂಬಲವಿದೆ. ಕೇವಲ ಈ ನೀರಾವರಿ ಯೋಜನೆಯಷ್ಟೇ ಅಲ್ಲದೇ ತಾಲೂಕಿನ ಅಭಿವೃದ್ದಿಗೆ ಕೆಲಸಗಳನ್ನು ಮಾಡಬೇಕು ಏನು ಮಾಡಿದರೆ ಸೂಕ್ತ ಎಂಬುದರ ಬಗ್ಗೆ ಎಲ್ಲರೂ ಒಟ್ಟಾಗಿ ಯೋಜನೆ ರೂಪಿಸಿ ಅದಕ್ಕೆ ಅಗತ್ಯವಿರುವಂತಹ ಅಧಿಕಾರಿಗಳನ್ನು ಮಂತ್ರಿಗಳನ್ನು ಸ್ಥಳಕ್ಕೆ ಕರೆಯಿಸಿ ತೀರ್ಮಾನ ಮಾಡೋಣ ಈ ಹೇಮಾವತಿ ಕಾಮಗಾರಿಯನ್ನು ಪೂರ್ಣಗೊಳಿಸುವುದು ನನ್ನ ಜವಾಬ್ದಾರಿ ಇನ್ನಾದರು ಹೋರಾಟ ಅಂತ್ಯಗೊಳಿಸಿ ಎಂದು ಮನವಿ ಮಾಡಿದರು.



ಚಿಕ್ಕನಾಯನಹಳ್ಳಿ ಪಟ್ಟಣದ ತಾಲೂಕು ಆಡಳಿತ ಸೌಧದ ಮುಂಭಾಗ ದಲ್ಲಿ ನಡೆಯುತ್ತಿರುವ 5ನೇ ದಿನದ ನೀರಾವರಿ ಹೋರಾಟದ ಸತ್ಯಾಗ್ರಹ ಸ್ಥಳಕ್ಕೆ ಶಾಸಕ ಸುರೇಶ ಬಾಬು ಭೇಟಿ ನೀಡಿ ಮಾತನಾಡಿದರು.

ಶಾಸಕರ ಮನವಿ ಸ್ಪಂದಿಸದ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಮಧು ಮಾತನಾಡಿ ಈ ನೀರಾವರಿ ಯೋಜನೆಗಾಗಿ ನಿಮ್ಮ ಜವಾಬ್ದಾರಿ ಹಾಗೂ ನೀವು ಮಾಡಿ ರುವಂತಹ ಕೆಲಸಗಳು ನಮಗೆ ತಿಳಿದಿವೆ. ನಾವು ನಿಮ್ಮೊಂದಿಗೆ ಇದ್ದೇವೆ ಆದರೆ ಈ ಯೋಜನೆಯ ನೀರಾವರಿ ಚೀಫ್ ಇಂಜಿನಿಯರ್‌ಈ ಪ್ರತಿಭಟನೆಯ ಸ್ಥಳಕ್ಕೆ ಬರಬೇಕು ಎಂದು ಪಟ್ಟು ಹಿಡಿದರು.

ಈ ಸಂದರ್ಭದಲ್ಲಿ ಭೂಸ್ವಾಧೀನ ಇಲಾಖೆಯ ಎಸ್‌ಎಲ್‌ಓ ಮಂಜುಳಾ, ತಹಸೀಲ್ದಾರ್‌ಮಮತಾ ಎಂ, ಎಇಇ ಪ್ರಭಾಕರ್, ಮಾಜಿ ಜಿ.ಪಂ.ಸದಸ್ಯ ರಾಮಚಂದ್ರಯ್ಯ, ಡಿಸಿಸಿ ಬ್ಯಾಂಕ್ ನಿರ್ದೇಶಕ ಸಿಂಗದಹಳ್ಳಿರಾಜ್‌ಕುಮಾರ್‌ತರಬೇನಹಳ್ಳಿ ಷಡಾಕ್ಷರಿ , ಗೋವಿಂದಪ್ಪ ಸೇರಿದಂತೆ ಇತರರು ಇದ್ದರು.